**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 20.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್ ಎಲ್ ಜಿ ವಕೀಲರಿಂದಃ**

ಈ ದಾವೆಯನ್ನು ನಾನು, ನನ್ನ ಅತ್ತೆ, ನನ್ನ ಮೈದುನ ಹಾಗೂ ನನ್ನ ಇಬ್ಬರು ನಾದಿನಿಯರು ಸೇರಿ ಆಸ್ತಿಗೋಸ್ಕರ ನಮ್ಮ ಮಾವರವರ ವಿರುದ್ಧ ಸಲ್ಲಿಸಿರುತ್ತೇವೆ. ದಾವಾ ಆಸ್ತಿ 10 ಎಕರೆ 28 ಗುಂಟೆ ಜಮೀನು ಇರುತ್ತದೆ. ಸದರಿ ಆಸ್ತಿ ತಾರಿಹಾಳ ಗ್ರಾಮದಲ್ಲಿದ್ದು ಅದರ ಸರ್ವೆ ನಂ.60/1 ಆಗಿರುತ್ತದೆ. ಸದರಿ ಆಸ್ತಿ ನಮಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಈ ಆಸ್ತಿಯನ್ನು ಹೊರತುಪಡಿಸಿ ನಮಗೆ ಬೇರೆ ಆಸ್ತಿಗಳು ಇರುವುದಿಲ್ಲ. ನೀವು, ನಿಮ್ಮ ಅತ್ತೆ ಮಾವ, ಮೈದುನ ಹಾಗೂ ನಾದಿನಿಯವರು ಕೂಡಿಯೇ ವಾಸವಾಗಿದ್ದಿರಾ ಎಂದರೆ ಸಾಕ್ಷಿ ಇಲ್ಲ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಹಿರತನವನ್ನು ನಮ್ಮ ಮಾವ ಮಾಡುತ್ತಾರೆ. ನನ್ನ ಮಾವ ನಮ್ಮ ಮನೆಯ ಹಿರೆತನವನ್ನು ಸರಿಯಾಗಿ ಮಾಡಿಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಅವರು ಹಿರಿಯರಾದ ಕಾರಣ ಅವರೇ ಎಲ್ಲ ತೀರ್ಮಾನ ತೆಗೆದ ಕೊಳ್ಳುತ್ತಿದ್ದರು ಹಾಗೂ ನಾವು ಅವರಿಗೆ ಪ್ರಶ್ನೆ ಮಾಡುತ್ತಿರಲಿಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ನಮ್ಮ ಒಟ್ಟು ಕುಟುಂಬದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡು ಬಂದಿರುತ್ತಾರೆಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಒಟ್ಟು ಕುಟುಂಬದ ಮೇಲೆ ಕೆಟ್ಟ ಪರಿಣಾಮ ಬೀರುವ ರೀತಿಯಲ್ಲಿ ದಾಖಲೆಗಳನ್ನು ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಅಷ್ಟೊಂದು ಸಾಲ ಇರಲಿಲ್ಲ ಆದರೆ ಮದುವೆಗೋಸ್ಕರ ಸಾಲ ಆಗಿತ್ತು ಅದನ್ನು ನಾವು ದುಡಿದು ತೀರಿಸುತ್ತಿದ್ದೇವು. ಪ್ರತಿವಾದಿ ನಂ.1 ಮನೆತನದ ಖರ್ಚಿಗೆ ಸಾಲ ಮಾಡಿರುತ್ತಾರೆಂದರೆ ಸರಿಯಲ್ಲ. ಇತ್ತಿತ್ತಲಾಗಿ ನಮಗೆ ಮತ್ತು ಪ್ರತಿವಾದಿ ನಂ.1 ರವರಿಗೆ ಹೊಂದಾಣಿಕೆ ಇರದ ಕಾರಣ ನಾವು ಬೇರೆ ಬೇರೆಯಾಗಿ ವಾಸವಾಗಿದ್ದೇವು ಎಂದರೆ ಸರಿ. 2023 ನೇ ಇಸ್ವಿಯಲ್ಲಿ ಆಸ್ತಿಯಲ್ಲಿ ನಮಗೆ ಪಾಲು ಮಾಡಿಕೊಡಿ ಎಂದು ನಾನು ಪ್ರತಿವಾದಿ ನಂ.1 ಇವರಿಗೆ ಕೇಳಿಕೊಂಡಿರುತ್ತೇನೆ. ಆಗ ನನ್ನ

ಮಾವ ನ್ಯಾಯಾಲಯಕ್ಕೆ ಹೋಗೋಣ ಆಸ್ತಿಯಲ್ಲಿ 3 ಭಾಗ ಮಾಡಿಕೊಡುತ್ತೇನೆ ಎಂದು ಹೇಳಿದರು. ನಾವು ಉಪ ನೊಂದಣಾಧಿಕಾರಿ ಕಚೇರಿಗೆ ಆಸ್ತಿಯಲ್ಲಿ ಮೂರು ಭಾಗ ಮಾಡಿಕೊಳ್ಳಲು ಹೋದಾಗ ಪ್ರತಿವಾದಿ ನಂ.2 ಬಂದು ದಾಖಲೆ ಮಾಡಿಕೊಂಡ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಪ್ರತಿವಾದಿ ನಂ.1 ಹಣ ಪಡೆದುಕೊಂಡು ಯಾರ್ಯಾರಿಗೋ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದು ಇತ್ತೀಚೆಗೆ ನನಗೆ ಗೊತ್ತಾಯಿತು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮದ್ಯಪಾನ ಮಾಡುತ್ತಾರೆ ಹಾಗೂ ಅವರಿಗೆ ಜೂಜಾಟ ಇತರೆ ಕೆಟ್ಟ ಹವ್ಯಾಸಗಳು ಇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮ ದುಶ್ಚಟಕ್ಕಾಗಿ ಪ್ರತಿವಾದಿ ನಂ.1 ಹಣ ಖರ್ಚು ಮಾಡಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ನನ್ನ ಗಂಡ ಹಾಗೂ ನನ್ನ ಮೈದುನ ಇವರಿಗೆ ಪಾಲು ಕೊಡಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಪಟ್ಟರು ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಇವರು ಶಾಲೆ ಕಲಿತಿಲ್ಲ ಆದರೆ ಸಹಿ ಮಾತ್ರ ಮಾಡುತ್ತಾರೆ. ಪ್ರತಿವಾದಿ ನಂ.1 ಇವರದು ಯಾವುದೇ ತಪ್ಪು ಇಲ್ಲ ಹಾಗೂ ಪ್ರತಿವಾದಿ ನಂ.2 ಮೋಸತನದಿದ ಪ್ರತಿವಾದಿ ನಂ.1 ಇವರ ಕಡೆಯಿಂದ ಖರೀದಿ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**